**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮೂಡಿಗೆರೆ**

**ಸಿ.ಸಿ. ಸಂಖ್ಯೆ: 2047/2024**

ಪಿರ್ಯಾದಿ: ರಾಜ್ಯ, ಪರವಾಗಿ ಮೂಡಿಗೆರೆ ಪೊಲೀಸ್ ಠಾಣೆ,
ಮೂಡಿಗೆರೆ.

ವಿರುದ್ಧ

ಆರೋಪಿ: ದುಗ್ಗಪ್ಪಗೌಡ.ಡಿ.ಆರ್,
ವಯಸ್ಸು ಸುಮಾರ 63 ವರ್ಷ,
ಬಿನ್ ರಾಮೇಗೌಡ,
ವಾಸ: ಬೇಲೂರು ರಸ್ತೆ,
ಮೂಡಿಗೆರೆ ಪಟ್ಟಣ ಮತ್ತು ತಾಲ್ಲೂಕು,
ಚಿಕ್ಕಮಗಳೂರು ಜಿಲ್ಲೆ.

ದೋಷಾರೋಪಣೆ

ಶ್ರೀ ವಿಶ್ವನಾಥ್.ಎ, ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ಮೂಡಿಗೆರೆ, ಆದ ನಾನು, ಆರೋಪಿಯಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆಗಳು ಏನೆಂದರೆ:-

ದಿನಾಂಕ 14.02.2024 ರಂದು ಬೆಳಗ್ಗೆ ಸುಮಾರು 12.30 ರ ಸಮಯದಲ್ಲಿ ಮೂಡಿಗೆರೆ ಪೊಲೀಸ್ ಠಾಣಾ ವ್ಯಾಪ್ತಿಯ ಮೂಡಿಗೆರೆ ಪಟ್ಟಣದ ಪಂಚಾಯತಿ ಸ್ವತ್ತಿನ ಸಂಖ್ಯೆ: 8-9-17 ರಲ್ಲಿನ ಅಸೆಸ್ಮೆಂಟ್ ನಂ.315/1/34 ರ ಜಾಗಕ್ಕೆ ಚಾಸಾ1 ರವರು ಬಂದು ನೋಡಿ ಪರಿಶೀಲನೆ ಮಾಡಿ ಆರೋಪಿಯಾದ ನಿಮ್ಮನ್ನು ಯಾರು ಕಬ್ಬಿಣದ ಕಂಬಗಳನ್ನು ಕಿತ್ತು ಹಾಕಿರುವುದು ಎಂದು ಕೇಳಿದ್ದಕ್ಕೆ, ನಾನೇ ಕಬ್ಬಿಣದ ಕಂಬಗಳನ್ನು ಕಿತ್ತು ಹಾಕಿದ್ದು, ಏನು ಕಿತ್ತುಕೊಳ್ಳುತ್ತಿಯಾ, ಅದು ನಮ್ಮ ಜಾಗ, ಕೋರ್ಟ್ ನಲ್ಲಿ ಇದ್ದರೆ ಏನು? ನೀನು ಏಕೆ ನಮ್ಮ ಜಾಗಕ್ಕೆ ಬಂದಿದ್ದೀಯಾ ಎಂದು ಅವಾಚ್ಯ ಶಬ್ಧಗಳಿಂದ ಬೈದು ಉದ್ದೇಶಪೂರ್ವಕವಾಗಿ ಶಾಂತಿಭಂಗವನ್ನುಂಟು ಮಾಡಿರುತ್ತೀರಿ. ಈ ರೀತ್ಯಾ ಆರೋಪಿಯಾದ ನೀವು ಭಾರತ ದಂಡ ಸಂಹಿತೆ ಕಲಂ **504** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ.

**2.** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿಯಾದ ನೀವು ಮುಂದುವರೆದು, ಇನ್ನೊಮ್ಮೆ ಈ ಜಾಗಕ್ಕೆ ಬಂದರೆ ನಿನಗೆ ಒಂದುಕ ಗತಿ ಕಾಣಿಸುತ್ತೇನೆ ಎಂದು ಚಾಸಾ1 ರವರಿಗೆ ಪ್ರಾಣ ಬೆದರಿಕೆ ಹಾಕಿರುತ್ತೀರಿ. ಈ ರೀತ್ಯಾ ಆರೋಪಿಯಾದ ನೀವು ಭಾರತ ದಂಡ ಸಂಹಿತೆ ಕಲಂ

**506** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

**3.** ಚಾಸಾ1 ರವರು ಸದರಿ ನಿವೇಶನದಲ್ಲಿ ಅಳವಡಿಸಿದ್ದ ಸಿಸಿ ಕ್ಯಾಮೆರಾವನ್ನು ಪರಿಶೀಲನೆ ಮಾಡಿದಾಗ, ದಿನಾಂಕ 10.02.2024 ರಂದು ಬೆಳಗ್ಗೆ ಸುಮಾರು 11.44 ರ ಸಮಯದಲ್ಲಿ ಆರೋಪಿಯಾದ ನೀವು 4 ಜನ ಅಪರಿಚಿತ ಕೂಲಿ ಕಾರ್ಮಿಕರನ್ನು ಕರೆದುಕೊಂಡು ಬಂದು, ಚಾಸಾ1 ರವರ ಸ್ವಾಧಿನಾನುಭವದಲ್ಲಿರುವ ಚಾಸಾ6-ಮಂಚೇಗೌಡ ರವರ ಬಾಬ್ತು ನಿವೇಶನಕ್ಕೆ ಅತಿಕ್ರಮವಾಗಿ ಪ್ರವೇಶವನ್ನುಂಟು ಮಾಡಿರುತ್ತೀರಿ. ಈ ರೀತ್ಯಾ ಆರೋಪಿಯಾದ ನೀವು ಭಾರತ ದಂಡ ಸಂಹಿತೆ ಕಲಂ **447** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ.

**4.** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿಯಾದ ನೀವು ಮುಂದುವರೆದು, ಈ ಹಿಂದೆ ಚಾಸಾ1 ರವರು ಬೇಲಿ ಮಾಡಲು ಅಳವಡಿಸಿದ್ದ 2 ಕಬ್ಬಿಣದ ಕಂಬಗಳನ್ನು ಕಿತ್ತುಹಾಕಿ, ರಸ್ತೆಯನ್ನು ನಿರ್ಮಿಸಿಕೊಂಡು ಚಾಸಾ1 ರವರಿಗೆ ಸುಮಾರು ರೂ.20,000/- ರೂಗಳಷ್ಟು ನಷ್ಟವನ್ನುಂಟು ಮಾಡಿರುತ್ತೀರಿ. ಈ ರೀತ್ಯಾ ಆರೋಪಿಯಾದ ನೀವು ಭಾರತ ದಂಡ ಸಂಹಿತೆ ಕಲಂ **427** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ.

ಸದರಿ ಮೇಲ್ಕಂಡ ಆರೋಪಗಳನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಮಾಡಿದ್ದರಿಂದ*,* ಅವುಗಳು ಈ ನ್ಯಾಯಾಲಯದಿಂದ ವಿಚಾರಣೆಯಾಗತಕ್ಕದೆಂದು ಆದೇಶಿಸಲಾಗಿದೆ*.*

ಪ್ರಃ 1. ಈಗ ಮೇಲೆ ಓದಿ ಹೇಳಿದ ದೋಷಾರೋಪಣೆಯನ್ನು ಕೇಳಿದ್ದೀರಾ***?*** ಅವುಗಳು ನಿಮಗೆ ಅರ್ಥವಾಯಿತೇ***?***

ಆರೋಪಿಯ ಉತ್ತರಃ

ಪ್ರಃ 2. ನೀವು ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ***?***

ಆರೋಪಿಯ ಉತ್ತರಃ

*(ದಿನಾಂಕ 20.02.2025 ರಂದು ದೋಷಾರೋಪಣೆಯನ್ನು ಆರೋಪಿಗೆ ತಿಳಿಯುವ ಭಾಷೆಯಲ್ಲಿ ಓದಿ, ಅವರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಬರೆದುಕೊಳ್ಳಲಾಯಿತು. ಅದು ಸತ್ಯವಾಗಿಯೂ ಮತ್ತು ಸರಿಯಾಗಿಯೂ ಇರುತ್ತದೆ ಎಂದು ಪ್ರಮಾಣೀಕರಿಸುತ್ತೇನೆ)*

**Sd/-**

ಮೂಡಿಗೆರೆ
ದಿನಾಂಕಃ 20.02.2025

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಮೂಡಿಗೆರೆ.